	ಅಭಿವೃದ್ಧಿಪಡಿಸುವುದು
11	ತೋಟಗಾರಿಕೆ ಪರಿಕರಗಳ ಖರೀದಿ
12	ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ತಕ್ಷಣವೇ ತೆಗೆದು ಖಾಲಿ ಜಾಗಗಳಲ್ಲಿ ಹೊಸದಾಗಿ ಮರ ಜಾತಿಯ ಗಿಡಗಳನ್ನು ನಾಟಿ ಮಾಡಿ ಸಂರಕ್ಷಿಸಲಾಗುತ್ತಿದೆ.

ಆ) ಹೌದು, ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ತಕ್ಷಣವೇ ತೆಗೆದು ಖಾಲಿ ಜಾಗಗಳಲ್ಲಿ ಹೊಸದಾಗಿ ಮರ ಜಾತಿಯ ಗಿಡಗಳನ್ನು ನಾಟಿ ಮಾಡಿ ಸಂರಕ್ಷಿಸಲಾಗುತ್ತಿದೆ.

ಮೇಲಿನಂತೆ

ಇ)

ವರ್ಷ	ಅನುದಾನ (ರೂ.ಕೋಟಿಗಳಲ್ಲಿ)
2007–08	1.43
2008–09	3.56

ಈ) ಮೇಲಿನ (ಅ) ನಲ್ಲಿರುವಂತೆ

ಸಂಕಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳು

983 (1521) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ನಷ್ಟವನ್ನು ಹೊಂದಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು? ಅವುಗಳು ನಷ್ಟವನ್ನು ಅನುಭವಿಸಲು ಕಾರಣಗಳೇನು?

ಆ) ನಷ್ಟದ ಹಿನ್ನೆಲೆ ಇರುವ ಎಷ್ಟು ಕಾರ್ಖಾನೆಗಳನ್ನು ಸರ್ಕಾರ ಮುಚ್ಚಲು ಅಥವಾ ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಿದೆ (ವಿವರ ನೀಡುವುದು)?

ಇ) ಕಬ್ಬು ಉತ್ಪಾದನಾ ಪ್ರಮಾಣದ ಏರಿಳಿತಕ್ಕೆ ಕಾರಣಗಳೇನು; (ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಸರ್ಕಾರಿ ವಲಯದ 1, ಸಹಕಾರಿ ವಲಯದ 12 ಮತ್ತು ಖಾಸಗಿ ವಲಯದ 3 ಒಟ್ಟು 16 ಕಾರ್ಖಾನೆಗಳು ನಷ್ಟದಲ್ಲಿವೆ.

ಕಾರ್ಖಾನೆಗಳು ನಷ್ಟ ಅನುಭವಿಸಲು ಪ್ರಮುಖ ಕಾರಣಗಳು ಕೆಳಗಿನಂತಿವೆ.

1) ಸಕ್ಕರೆ ಕಾರ್ಖಾನೆಗಳು ಸಕ್ಕರೆ ಘಟಕದ ಜೊತೆಗೆ ಉಪ ಉತ್ಪನ್ನ ಘಟಕಗಳನ್ನು ಅಳವಡಿಸಿಕೊಳ್ಳದೆ ಇರುವುದು.
2) ಕಾರ್ಖಾನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸದೇ ಇರುವುದು.
3) ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಹೆಚ್ಚಿನ ಪ್ರಮಾಣದ ಸಾಲಗಳು ತೀರಿಸದೇ ಅದರ ಮೇಲಿನ ಬಡ್ಡಿ
4) ಕಾರ್ಖಾನೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿರುವುದು.
5) ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಏರಿಳಿತ ಆಗುತ್ತಿರುವುದು.
6) ಕಾರ್ಖಾನೆಯಲ್ಲಿ ಹಳೆಯದಾಗಿರುವ ಯಂತ್ರೋಪಕರಣಗಳು ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ನುರಿಸದೇ ಇರುವುದು.
7) ಹಲವು ಹಂಗಾಮಿನಲ್ಲಿ ಅವಶ್ಯಕ ಪ್ರಮಾಣದ ಕಬ್ಬು ದೊರೆಯದೇ ಇರುವುದು.
8) ಕಾರ್ಖಾನೆ ವ್ಯಾಪ್ತಿ ಪ್ರದೇಶದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಕಬ್ಬು ಅಭಿವೃದ್ಧಿ ಪಡಿಸದೇ ಇರುವುದು.
9) ಕಾರ್ಖಾನೆಗಳ ಆಡಳಿತ ಮಂಡಳಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು.

ಆ) ಸರ್ಕಾರವು ಆರ್ಥಿಕ ಸಂಕಷ್ಟದಲ್ಲಿದ್ದ ಈ ಕೆಳಕಂಡ 8 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು LROT ಆಧಾರದ ಮೇಲೆ ದೀರ್ಘಾವಧಿ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ.

1) ಶ್ರೀ ರಾಮ ಸ.ಸ.ಕಾ, ಚುಂಚನಕಟ್ಟೆ
2) ಹೇಮಾವತಿ ಸ.ಸ.ಕಾ, ಶ್ರೀನಿವಾಸಪುರ
3) ಕರ್ನಾಟಕ ಸ.ಸ.ಕಾ, ಸಂಗೂರು

4) ದಕ್ಷಿಣ ಕನ್ನಡ ಸ.ಸ.ಕಾ, ಬ್ರಹ್ಮಾವರ
5) ರಾಯಬಾಗ್ ಸ.ಸ.ಕಾ, ರಾಯಬಾಗ್
6) ಶ್ರೀ ಭಾಗ್ಯಲಕ್ಷ್ಮಿ ಸ.ಸ.ಕಾ, ಖಾನಾಪುರ
7) ಆಳಂದ ಸ.ಸ.ಕಾ, ಭೂಸನೂರು
8) ಪಾಂಡವಪುರ ಸ.ಸ.ಕಾ, ಪಾಂಡವಪುರ

ಇವುಗಳಲ್ಲದೆ ಆರ್ಥಿಕ ಸಂಕಷ್ಟದಿಂದ ಸ್ಥಗಿತಗೊಂಡಿರುವ ವಾಣಿವಿಲಾಸ ಸ.ಸ.ಕಾ ಮತ್ತು ಭದ್ರಾ ಸ.ಸ.ಕಾಗಳನ್ನು ದೀರ್ಘಾವಧಿಯ ಮೇಲೆ ಖಾಸಗಿಯವರಿಗೆ ಗುತ್ತಿಗೆಗೆ ನೀಡಲು ಉದ್ದೇಶಿಸಲಾಗಿದೆ.

ಇ) ಬೇರೆ ಬೆಳೆಗಳಿಗೆ ಸಿಗುವ ದರ ಕಬ್ಬಿಗಿಂತ ಲಾಭದಾಯಕವಿದ್ದಾಗ ಕಬ್ಬು ಬೆಳೆಯುವುದು ಕಡಿಮೆಯಾಗುತ್ತದೆ ಹಾಗೂ ಕಬ್ಬಿಗೆ ಬೆಲೆ ಜಾಸ್ತಿಯಿದ್ದಾಗ ಅದನ್ನು ಬೆಳೆಯುವುದು ಜಾಸ್ತಿಯಾಗುತ್ತದೆ. ಆದ್ದರಿಂದ ಕಬ್ಬಿನ ಬೆಲೆಯಲ್ಲಿನ ಏರಿಳಿತವು ಕಬ್ಬು ಉತ್ಪಾದನಾ ಪ್ರಮಾಣದ ಮೇಲೆ ಪರಿಣಾಮ ಬೀರುತ್ತದೆ. ಕಬ್ಬಿನ ಕೊರತೆಯಿದ್ದಾಗ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ದರ ನೀಡಿ ಕಬ್ಬು ಖರೀದಿಸುತ್ತಾರೆ. ಬೇರೆ ಬೆಳೆಗಳಿಗಿಂತ ಕಬ್ಬಿಗೆ ದರ ಜಾಸ್ತಿ ಸಿಗುವುದೆಂದು ತಿಳಿದು ಎಲ್ಲರೂ ನಂತರದ ಹಂಗಾಮಿಗೆ ಕಬ್ಬನ್ನು ಜಾಸ್ತಿ ಬೆಳೆಯುತ್ತಾರೆ. ಅಗತ್ಯಕ್ಕಿಂತ ಹೆಚ್ಚಿಗೆ ಕಬ್ಬು ಬೆಳೆದಾಗ ಸಹಜವಾಗಿ ಅದಕ್ಕೆ ದರ ಕಡಿಮೆಯಾಗಿ ರೈತರು ನಷ್ಟ ಅನುಭವಿಸುತ್ತಾರೆ. ಇದರಿಂದ ನಂತರದ ಹಂಗಾಮುಗಳಲ್ಲಿ ಕಬ್ಬು ನಾಟಿ ಕಡಿಮೆ ಮಾಡುತ್ತಾರೆ. ಹಾಗೂ ಬೇರೆ ಲಾಭದಾಯಕ ಬೆಳೆಗಳಿಗೆ ಹೋಗುತ್ತರೆ. ಇದರಿಂದ ಕಬ್ಬಿನ ಉತ್ಪಾದನೆ ಕಡಿಮೆಯಾಗುತ್ತದೆ. ಪುನಃ ಕಬ್ಬಿಗೆ ಬೇಡಿಕೆ ಹೆಚ್ಚಾಗಿ ದರ ಏರಿಕೆಯಾಗುತ್ತದೆ. ಇದು ಪ್ರತಿ 4–5 ವರ್ಷಗಳ ಅವಧಿಯಲ್ಲಿ ಪುನರಾವರ್ತನೆಯಾಗುತ್ತದೆ.

ಎ.ಪಿ.ಎಲ್. ಕಾರ್ಡುದಾರರಿಗೆ ಪಡಿತರ ಅಕ್ಕಿ ವಿತರಣೆ

1522 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎ.ಪಿ.ಎಲ್. ಕಾರ್ಡುದಾರರಿಗೆ ಯಾವರೀತಿ ಪಡಿತರ ಅಕ್ಕಿ ವಿತರಿಸಲಾಗುತ್ತಿದೆ;

(ವಿವರ ನೀಡುವುದು);